**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.**

**ಪ್ರಕರಣ ಸಂಖ್ಯೆ: ಸ್ಪೆಷಲ್ ಎಸ್.ವಿ.ಸಿ. 1/2017**

ಅಸಾ : 02

ಚಾಸಾ : 02

ಸಾಕ್ಷಿದಾರರ ಹೆಸರು : ರೇಣುಕಾ ಬೂದಗಟ್ಟಿ

ತಂದೆಯ ಹೆಸರು : ಯಲ್ಲಪ್ಪ

ವಯಸ್ಸು : 48 ವರ್ಷ

ಉದ್ಯೋಗ : ದ್ವಿ.ದ.ಸ., ತಹಶೀಲ್ದಾರ ಕಛೇರಿ, ಹಾವೇರಿ

ವಾಸ ಸ್ಥಳ : ಹಾವೇರಿ.

ದಿನಾಂಕ: **25/09/2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಮಾನ್ಯ ವಿಶೇಷ ಸಾರ್ವಜನಿಕ ಅಭಿಯೋಜಕರಿಂದ: –**

1. 2009 ರಿಂದ ನಾನು ಹಾವೇರಿಯ ತಹಶೀಲ್ದಾರ ಕಛೇರಿಯಲ್ಲಿ ದ್ವಿ.ದ.ಸ. ಎಂದು ಕೆಲಸ ಮಾಡುತ್ತಿದ್ದೇನೆ. ಇಂದು ಹಾಜರಿರುವ ಆರೋಪಿ ಗೊತ್ತು.

2. ದಿನಾಂಕ:21/03/2013 ರಂದು ಲೋಕಾಯುಕ್ತ ಪೊಲೀಸರಾದ ಚಾಸಾ-58 ನನ್ನನ್ನು ಪಂಚರನ್ನಾಗಿ ಕರೆಯಿಸಿಕೊಂಡರು. ಆ ದಿನ ಸಂಜೆ ನಾನು ಲೋಕಾಯುಕ್ತ ಕಾರ್ಯಾಲಯಕ್ಕೆ ಹೋದೆ. ಬೇರೆ ಬೇರೆ ಇಲಾಖೆಯವರು ಬಂದಿದ್ದರು. ನನ್ನ ಮೇಲಾಧಿಕಾರಿಗಳು ನನ್ನನ್ನು ಪಂಚಳನ್ನಾಗಿ ನೇಮಿಸಿ ಕಳಿಸಿದ್ದರು.

3. ದಿನಾಂಕ:22/03/2013 ರಂದು ಬೆಳಿಗ್ಗೆ 5.00 ಘಂಟೆಗೆ ನಾವು ಪುನ: ಲೋಕಾಯುಕ್ತ ಕಾರ್ಯಾಲಯಕ್ಕೆ ಹೋದೆವು. ನಾನು, ಚಾಸಾ-5 ನನ್ನ ಸಹೋದ್ಯೋಗಿ, ಇತರ ಇಲಾಖೆಯ ಅಧಿಕಾರಿಗಳು ಮತ್ತು ಪೊಲೀಸರು ಇದ್ದೆವು. ಆರೋಪಿ ರಾಜಾಭಕ್ಷ ಗುಡಗೇರಿ ಎನ್ನುವವರು ಅಕ್ರಮ ಆಸ್ತಿ ಸಂಪಾದನೆ ಮಾಡಿದ್ದು, ಅವರ ಮನೆಯ ಮೇಲೆ ದಾಳಿ ಮಾಡುವ ಕಾಲಕ್ಕೆ ಹಾಜರಿದ್ದು, ಪಂಚರಾಗಿ ಸಹಕರಿಸುವಂತೆ ತಿಳಿಸಿದರು.

4. ನಮ್ಮನ್ನು ಬೆಳಿಗ್ಗೆ 6.10 ಕ್ಕೆ ಆರೋಪಿ ಮನೆಗೆ ಕರೆದುಕೊಂಡು ಹೋದರು. ಮನೆಯ ಬಾಗಿಲು ಮುಚ್ಚಿತ್ತು, ಬಾಗಿಲು ಬಡಿದರೂ ಯಾರೂ ತೆರೆಯಲಿಲ್ಲ. ನಂತರ 6.35 ಘಂಟೆಗೆ ಒಬ್ಬರು ಬಂದು ಬಾಗಿಲು ತೆಗೆದರು. ಬಾಗಿಲು ತೆಗೆದವರನ್ನು ವಿಚಾರಿಸಿದಾಗ ಅವರು ಆರೋಪಿ ಎಂದು ಗೊತ್ತಾಯಿತು. ಪೊಲೀಸರು ತಮ್ಮ ಪರಿಚಯ ಮಾಡಿಕೊಂಡು ಶೋಧನೆ ಕುರಿತು ವಾರೆಂಟ್ ತಂದ

ವಿಷಯ ತಿಳಿಸಿದರು. ನಾವೆಲ್ಲ ಮನೆಯ ಒಳಗೆ ಹೋದೆವು. ಪೊಲೀಸರು ಕಿಚನ್ ಮತ್ತು ಬೆಡರೂಮ ಸಹ ಶೋಧನೆ ನಡೆಸಿದರು. ಬೆಳ್ಳಿ ಮತ್ತು ಬಂಗಾರ, ಬಟ್ಟೆ-ಬರೆ ಇದ್ದವು.

5. ಮನೆಯವರನ್ನು ಕರೆದು ಬಟ್ಟೆಯ ಮೌಲ್ಯವನ್ನು ಕೇಳಿ ನಿರ್ಧರಿಸಲಾಯಿತು. ಬಂಗಾರ ಮೌಲ್ಯಮಾಪನ ಕುರಿತು ಒಬ್ಬರು ಬಂದಿದ್ದರು. ಅವರು ಮೌಲ್ಯಮಾಪನ ಮಾಡಿದರು. ಮನೆಯಲ್ಲಿ ಸಾಗವಾಣಿ ಕಟ್ಟಿಗೆಯ ಸೋಫಾ ಇತ್ತು. ಮನೆಯ ಕಟ್ಟಡದ ಮೌಲ್ಯವನ್ನು ಸಂಗ್ರಹಿಸಲಾಯಿತು. ಹೊರಗೆ ಒಂದು ಕಾರು, ಬೈಕು ಮತ್ತು ಹೋಂಡಾ ವಾಹನ ಇದ್ದವು. ಮನೆಬಳಕೆಯ ಸಾಮಾನುಗಳು ಮತ್ತು ಆಸ್ತಿಯ ದಾಖಲೆಗಳು ಇದ್ದವು.

6. ಪೊಲೀಸರು ಈ ಮೇಲೆ ಹೇಳಿದ ಸ್ವತ್ತಿನ ಮೌಲ್ಯಮಾಪನ ಮಾಡಿ ಪಂಚನಾಮೆ ತಯಾರಿಸಿ ನನ್ನ ಸಹಿ ಪಡೆದರು. ಪಂಚನಾಮೆಯನ್ನು ಈಗ ನಿಪಿ-4, ನನ್ನ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಆ ದಿನ ಪಡೆಯಲಾದ ದಾಖಲೆಗಳಿಗೆ ನಮ್ಮ ಸಹಿ ಪಡೆದರು. ಸದರಿ ದಾಖಲೆಗಳನ್ನು ಗುರುತಿಸಬಲ್ಲೆ. ಈಗ ತೋರಿಸಿದ 21 ದಾಖಲೆಗಳ ಮೇಲೆ ನನ್ನ ಸಹಿ ಇರುತ್ತವೆ. ಸದರಿ ದಾಖಲೆಗಳ ಯಾದಿಯನ್ನು ಈಗ ಮುಮಾ-1 ಎಂದು ಗುರುತಿಸಲಾಯಿತು. ಮುಮಾ-1 ರ ಅಡಿಯಲ್ಲಿ ಖರೀದಿ ಒಪ್ಪಂದ ಪತ್ರ, ಖರೀದಿ ಪತ್ರ, ಒಪ್ಪಿಗೆ ಕರಾರು ಪತ್ರ, 9 ಖರೀದಿ ಪತ್ರಗಳು, 2 ಕಬ್ಜಾವತ್ತಿ ಕರಾರು ಪತ್ರಗಳು, 4 ಉಂಡುಬಿಡುವ ಕರಾರು ಪತ್ರ ಮತ್ತು ಇತರ 3 ಖರೀದಿ ಪತ್ರಗಳು ಹೀಗೆ ಕ್ರಮವಾಗಿ 21 ದಾಖಲೆಗಳಿರುತ್ತವೆ.

7. ಈಗ ತೋರಿಸಿದ 22 ದಾಖಲೆಗಳ ಮೇಲೆ ನನ್ನ ಸಹಿ ಇರುತ್ತವೆ. ಸದರಿ ದಾಖಲೆಗಳ ಯಾದಿಯನ್ನು ಈಗ ಮುಮಾ-2 ಎಂದು ಗುರುತಿಸಲಾಯಿತು. ಮುಮಾ-2 ರ ಅಡಿಯಲ್ಲಿ 3 ಆರ್.ಟಿ.ಸಿ., ಸ್ಥಿರ ಮತ್ತು ಚರ ಆಸ್ತಿ ಪಟ್ಟಿಯ 2 ಝರಾಕ್ಸ ದಾಖಲೆಗಳು, ದೇಣಿಗೆ ಪಾವತಿ ರಸೀದಿ, ಪಾಸಬುಕ್, ರಸೀದಿ, ಚೆಕ್ಕಪುಸ್ತಕದ ರೆಕಾರ್ಡ್ಸ ಸ್ಲಿಪ್, ಚಲನ್ ಕೌಂಟರ ಫೈಲು, ರಸೀದಿ, ಒಟ್ಟಿಗೆ ಮೂರು ಕೌಂಟರ ಫೈಲು, ಇತರ ಎರಡು ಕೌಂಟರ ಫೈಲು, ಎರಡು ರಸೀದಿಗಳು, 5 ಜಮೀನುಗಳ ಖಾತಾ ಉತಾರಗಳು, ಒಂದು ಜಮೀನಿನ ಖಾತಾ ಉತಾರ ಝರಾಕ್ಸ, ಟಾಯರ ಖರೀದಿ ರಸೀದಿ, ಲೈಫ್ ಇನ್ಸೂರೆನ್ಸ ಪ್ರಿಮಿಯಂ ರಸೀದಿ, ಸಹಾಯಕ ಕೃಷಿ ನಿರ್ದೇಶಕರಿಗೆ ಸಲ್ಲಿಸಿದ ಮನವಿ ಪ್ರತಿ ಹೀಗೆ ಕ್ರಮ ಸಂಖ್ಯೆ 1 ರಿಂದ 22 ರ ದಾಖಲೆಗಳಿರುತ್ತವೆ.

*(ಈ ಹಂತದಲ್ಲಿ ಮಾನ್ಯ ವಿಶೇಷ ಅಭಿಯೋಜಕರ ವಿನಂತಿ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)*

**(**ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.**)**

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ವಿಶೇಷ ನ್ಯಾಯಾಧೀಶರು, ಹಾವೇರಿ.